ಬಂದು ಹೊಳೆಯಲ್ಲಿ ಸೇರಿತು ಎನ್ನುವ ಪ್ರಶ್ನೆ ಬೇಡ. ಆ ಫ್ಯಾಕ್ಟರಿಯವರೇ ಜವಾಬ್ದಾರರಾಗಿರುತ್ತಾರೆ. ದಯವಿಟ್ಟು ಫ್ಯಾಕ್ಟರಿ ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ಇದರ ಮೇಲೆ ಕ್ರಮವಾಗಬೇಕೆಂದು ನಾನು ಒತ್ತಾಯಿಸುತ್ತೇನೆ.

ಶ್ರೀ ಸಿ.ಚನ್ನಿಗಪ್ಪ (ಅರಣ್ಯ ಸಚಿವರು) : ರೈತರಿಗೆ ಲಾಸ್ ಆಗುವ ದುಡ್ಡನ್ನು ನೀವು ಸುಮಾರು 60 ರೂಪಾಯಿ ಕಟ್ಟಬೇಕೆಂದು ಹೇಳಿದ್ದೇವೆ. ಯಾವ ರೈತರಿಗೆ ಲಾಸ್ ಆಗುತ್ತದೆ. ಆ ಫ್ಯಾಕ್ಟರಿಯಿಂದ ಹಣ ಕಟ್ಟಿಸಿ ಕೊಡುತ್ತೇವೆ. ಮುಂದೆ ಆಗದ ರೀತಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

ಇ) ವಿಷಯ : ಆನೆ ಹಾವಳಿಯಿಂದ ತೆಂಗು, ಅಡಿಕೆ, ಬಾಳೆ ಬೆಳೆಗಳು ನಾಶವಾಗಿರುವ ಬಗ್ಗೆ.

ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) : ನಾನೂ ಶೂನ್ಯವೇಳೆಯಲ್ಲಿ ನಾನು ಈ ವಿಚಾರವನ್ನು ಈಗಾಗಲೇ ಪ್ರಶ್ನೋತ್ತರ ವೇಳೆಯಲ್ಲಿ ನಾನು ಪ್ರಸ್ತಾಪಿಸಿದ್ದೇನೆ. ಅರಣ್ಯ ಸಚಿವರು ಅದಕ್ಕೆ ಉತ್ತರವನ್ನು ಕೊಡಬೇಕೆಂದು ತಮ್ಮ ಮೂಲಕ ಕೊರುತ್ತೇನೆ.

ಶ್ರೀ ಸಿ.ಚನ್ನಿಗಪ್ಪ (ಅರಣ್ಯ ಸಚಿವರು) : ಮಾನ್ಯ ಶಾಸಕರು ಮೊದಲೇ ಕೇಳಿದ್ದರು. ಆದರೆ ಉತ್ತರ ಕೊಡಲಿಕ್ಕೆ ತಾವು ಅವಕಾಶ ಕೊಟ್ಟಿರಲಿಲ್ಲ. ಅವರೇನು ಮೂರು ಆನೆ ಮತ್ತು ಮರಿ ಆನೆ, ತೆಂಗು, ಅಡಿಕೆ, ಬಾಳೆ ಗಿಡಗಳನ್ನು ಉರುಳಿಸಿದರೆ, ನಾಶಪಡಿಸಿದೆ, ನಾಶವಾದಂತಹ ಬೆಳೆಗಳಿಗೆ ಕೊಡುವ ಪರಿಹಾರ ಮತ್ತು ಏನು ತೊಂದರೆಯಾಗಿದೆ, ಅದನ್ನು ಕೊಡುವಂಥ ಕೆಲಸವನ್ನು ಈಗಾಗಲೇ ನಮ್ಮ ಪಿಸಿಸಿಎಫ್‌ರವರು ಮತ್ತು ಸೆಕ್ರೆಟರಿಯವರು ತೆಗೆದುಕೊಂಡಿದ್ದಾರೆ. ಆ ಪ್ರಕಾರ ಅದನ್ನು ಸರ್ಕಾರದಿಂದ ಭರ್ತಿ ಮಾಡಿಸುವ ಕೆಲಸ ಮಾಡಿಸುತ್ತೇವೆ.

ಚೇರ್ಮನ್ : ಶ್ರೀ ಕೆ.ಆರ್.ರಮೇಶ್ ಕುಮಾರ್, ಶ್ರೀ ಶಿವಾನಂದ ಎಸ್. ಪಾಟೀಲ್, ಶ್ರೀ ಬಿ.ಆರ್.ಪಾಟೀಲ್, ಶ್ರೀ ಎಂ.ಟಿ.ಬಿ.ನಾಗರಾಜು, ಯಾರು ಇಲ್ಲ ಕೊನೆಯದಾಗಿ ಹಂಪನಗೌಡ ಬಾದರ್ಲಿಯವರು. ಆದರೆ ಸಮಯವನ್ನು ಸಹಕಾರ ಸಚಿವರು ಕೇಳಿದ್ದಾರೆ.

ಶ್ರೀ ಹಂಪನಗೌಡ ಬಾದರ್ಲಿ : ಸಮಯ ಎಂದರೆ ಎಷ್ಟು ದಿವಸ ಬೇಕು? ಯಾವಾಗ ಕೊಡುತ್ತೀರಿ? ಏನೆಂಬುದು ನಿಖರವಾಗಿ ಹೇಳಬೇಕು.

ಚೇರ್ಮನ್ : ಇಲ್ಲಿ ಅನಾರೋಗ್ಯದ ಪ್ರಯುಕ್ತ ಅವರು ಪತ್ರ ಬರೆದಿದ್ದಾರೆ. ಅವರ ಆಗ ಮನವನ್ನು ನಿರೀಕ್ಷೆ ಮಾಡುತ್ತಿದ್ದೇವೆ.